ಅನುಬಂಧ -2

ಬೆಳಗಾಂ ಜಿಲ್ಲೆಯಲ್ಲಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ನಿಲಯಗಳ ವಿವರಗಳು

ಕ್ರಮ ಸಂಖ್ಯೆ	[illegible]ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಗಳ ಸಂಖ್ಯೆ	ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ ಗಳ ಸಂಖ್ಯೆ
1	2	3	4
1.	ಬೆಳಗಾಂ ತಾಲ್ಲೂಕು	3	4
2.	ಅಥಣಿ ತಾಲ್ಲೂಕು	13	-
3.	ಚಿಕ್ಕೋಡಿ ತಾಲ್ಲೂಕು	10	1
4.	ಗೋಕಾಕ್ ತಾಲ್ಲೂಕು	15	1
5.	ಹುಕ್ಕೇರಿ ತಾಲ್ಲೂಕು	10	1
6.	ಖಾನಾಪುರ ತಾಲ್ಲೂಕು	4	-
7.	ರಾಮದುರ್ಗ ತಾಲ್ಲೂಕು	7	1
8.	ಬೈಲಹೊಂಗಲ ತಾಲ್ಲೂಕು	12	-
9.	ಸವದತ್ತಿ ತಾಲ್ಲೂಕು	15	-
10.	ರಾಯಬಾಗ್ ತಾಲ್ಲೂಕು	3	-
	ಒಟ್ಟು	92	8

ರಾಜ್ಯದಲ್ಲಿ ಅಂತರ್ಜಲ ಬಳಕೆ ಹಾಗೂ ನಿರ್ವಹಣೆ

2789 (3419) ಶ್ರೀ ನಾರಾಯಣ. ಆರ್ (ಬೆಳ್ಳಾವಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ವರ್ಷಗಳಲ್ಲಿ ಅಂತರ್ಜಲ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇದನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ?

ಇ) ಸಮರ್ಪಕವಾಗಿ ಅಂತರ್ಜಲ ಬಳಕೆ ಹಾಗೂ ನಿರ್ವಹಣೆ ಮಾಡಲು ಸೂಕ್ತ ಕಾಯಿದೆ ಮಾಡಲಾಗುವುದೇ ?

ಶ್ರೀ ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಬಂದಿದೆ.

ಆ) ರಾಜ್ಯದಾದ್ಯಂತ ನೀರಾವರಿಗಾಗಿ ಅಂತರ್ಜಲವನ್ನು ಯಥೇಚ್ಛವಾಗಿ ಬಳಕೆ ಮಾಡುತ್ತಿರುವುದರಿಂದ ಜಲಮಟ್ಟವು ಕುಸಿಯುತ್ತಿದೆ. ಇದನ್ನು ನಿಯಂತ್ರಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಎಲ್ಲಾ 'ಬೂದು' ಮತ್ತು 'ಕಪ್ಪು' ತಾಲ್ಲೂಕುಗಳಲ್ಲಿ ಅಂತರ್ಜಲ ಕೃತಕ ಮರುಪೂರೈಕೆಯ ರಚನೆಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳನ್ನು ಹಮ್ಮಿಕೊಂಡಿದೆ.

ಇ) ಸಮರ್ಪಕವಾಗಿ ಅಂತರ್ಜಲ ಬಳಕೆ ಹಾಗೂ ನಿರ್ವಹಣೆಯ ದೃಷ್ಟಿಯಿಂದ ಕಾಯಿದೆಯನ್ನು ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಖಾಸಗಿ ಬಡಾವಣೆಗಳ ನಿರ್ಮಾಣ ಮಾಡಲು ಇರುವ ಅವಕಾಶ ಕುರಿತು

2790 (3457) ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿನನ್ವಯ ಖಾಸಗೀ ಬಡಾವಣೆಗಳನ್ನು ನಿರ್ಮಾಣ ಮಾಡಲು ಅವಕಾಶವಿದೆಯೇ?

ಆ) ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಖಾಸಗೀ ಬಡಾವಣೆಗಳ ನಿರ್ಮಾಣಕ್ಕೆ ನೀಡುತ್ತಿದ್ದ ಎನ್.ಒ.ಸಿಯನ್ನು ನಿಲ್ಲಿಸಲು ರಾಜ್ಯ ಸರ್ಕಾರ ಸೂಚನೆ ನೀಡಿದೆಯೇ? ನೀಡಿದಲ್ಲಿ ಯಾರು ಯಾವಾಗ ಈ ನಿರ್ದೇಶನವನ್ನು ನೀಡಿದ್ದಾರೆ.

ಇ) ಈ ನಿರ್ದೇಶನ ನೀಡಲು ಪ್ರಮುಖ ಕಾರಣಗಳೇನು ? ಇನ್ನು ಮುಂದೆ ಈ ಖಾಸಗೀ ಸಹಕಾರ ಸಂಘಗಳ ಬಡಾವಣೆಗಳಿಗೆ ಎನ್.ಒ.ಸಿ ನೀಡುವುದನ್ನು ಶಾಶ್ವತವಾಗಿ ನಿಲ್ಲಿಸಲಾಗಿದೆಯೇ? ಇಲ್ಲವಾದಲ್ಲಿ ಎಂದಿನಿಂದ ಎನ್.ಒ.ಸಿ ನೀಡಲು ಆದೇಶ ನೀಡಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು. ಸರ್ಕಾರದ ಪತ್ರ ಸಂಖ್ಯೆ : ಯುಡಿಡಿ 179 ಎಂಐಬಿ 2000 ದಿನಾಂಕ 15.04.2000ರಲ್ಲಿ ನಿರ್ದೇಶನವನ್ನು ನೀಡಲಾಗಿದೆ.

ಇ) ಸುಮಾರು 70,000 ಅರ್ಜಿಗಳು ಬಾಕಿ ಉಳಿದಿರುವ ಕಾರಣ, ಖಾಸಗಿ ಬಡಾವಣೆಗಳ ನಿರ್ಮಾಣದಿಂದ ಈಗಾಗಲೇ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಕಾಯುತ್ತಿರುವವರಿಗೆ ತೊಂದರೆಯಾಗುತ್ತದೆಂಬ ದೃಷ್ಟಿಯಿಂದ ಎನ್.ಒ.ಸಿ. ನೀಡುವುದನ್ನು ನಿಲ್ಲಿಸುವಂತೆ ನಿರ್ದೇಶನ ನೀಡಲಾಗಿದೆ.